# ಮುಂಗಾರು

ಸಂಪಾದಕ: ವಡ್ಡರ್ಸೆ ರಘುರಾಮ ಶೆಟ್ಟಿ

MUNGARU KRNL 46 ಸಂಪುಟ 3 ಸಂಚಿಕೆ 28 — ಮಂಗಳೂರು, ಬುಧವಾರ ಅಕ್ಟೋಬರ್ 8, 1986 — ಬೆಲೆ 80 ಪೈಸೆ (ಮುಂಬೈ: 1-00 ರೂ.) ಪುಟ 8



ಜಾಯಿ ಕಾಡಿಗೆ

ಕಣ್ಣುಗಳನ್ನು ತಂಪಾಗಿ, ಸ್ವಸ್ಥವಾಗಿ ಇಡುವುದಲ್ಲದೆ,
ದೃಷ್ಟಿಯನ್ನು ನಿಚ್ಚಳಗೊಳಿಸುತ್ತದೆ ಹಾಗು
ಆಯಾಸಗೊಂಡ ಕಣ್ಣುಗಳಿಗೆ ವಿಶ್ರಾಂತಿಯನ್ನು
ಒದಗಿಸುತ್ತದೆ. WESTERN INDIA CHEMICAL CO. Bombay 400 066

ವಿತರಕರು: ಎಂ. ಮಿಲಾಪ್‌ಚಂದ ಎಂಡ್ ಕಂ. ಹಂಪನ ಕಟ್ಟ, ಮಂಗಳೂರು–575001.
ಫೋನ್: 23253.

ಪ್ರವಾಸೀ ಆಸ್ಟ್ರೇಲಿಯಾ ವಿರುದ್ಧ ನಡೆದ ಒಂದು ದಿನದ ಅಂತರ್ರಾಷ್ಟ್ರೀಯ ಕ್ರಿಕೆಟ್ ಸರಣಿಯನ್ನು 3-2ರಿಂದ ಗೆದ್ದ ಭಾರತ ತಂಡದ ನಾಯಕ ಕಪಿಲ್‌ದೇವ್, ಚಾರ್‌ಮಿನಾರ್ ಚಾಲೆಂಜ್ ಟ್ರೋಫಿಯನ್ನು ಸ್ವೀಕರಿಸುತ್ತಿರುವುದು (ಮೊದಲ ಚಿತ್ರ). ಸರಣಿಯುದ್ದಕ್ಕೂ ನೀಡಿದ ಶ್ರೇಷ್ಠ ಪ್ರದರ್ಶನಕ್ಕಾಗಿ 'ಸರಣಿ ಶ್ರೇಷ್ಠ' ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವ ರಮಣ್ ಲಾಂಬಾ (ಎರಡನೇ ಚಿತ್ರ). ರಾಜ್‌ಕೋಟ್‌ಪಂದ್ಯದ 'ಪಂದ್ಯ ಶ್ರೇಷ್ಠ' ಅಲನ್ ಬೋರ್ಡರ್ ಪ್ರಶಸ್ತಿ ಸ್ವೀಕರಿಸುತ್ತಿರುವುದು (ಮೂರನೇ ಚಿತ್ರ).

ಟಿ. ವಿ. ಚಿತ್ರಗಳು: ದಯಾನಂದ ಪಯ್ಯಾಡ, ಮಂಗಳೂರು

## ಜನತೆಯ ಪ್ರತಿಭಟನೆಗೆ ಮಣಿದ ಸರಕಾರ

# ವೆಂಕಟಸ್ವಾಮಿ ವರದಿಗೆ ತಿರಸ್ಕಾರ

# ಹೊಸ ಆಯೋಗ ರಚನೆಗೆ ನಿರ್ಧಾರ

(ಮುಂಗಾರು ವರದಿ)

**ಬೆಂಗಳೂರು, ಅ. 7– ವೆಂಕಟಸ್ವಾಮಿ ಆಯೋಗದ ವರದಿಯ ಶಿಫಾರಸುಗಳನ್ನು ತಿರಸ್ಕರಿಸಿ, ಹಿಂದುಳಿದ ವರ್ಗಗಳನ್ನು ವಸ್ತುನಿಷ್ಠ ಹಾಗೂ ಹೆಚ್ಚು ನಿರ್ದಿಷ್ಟವಾದ ಮಾರ್ಗದರ್ಶಕ ಸೂತ್ರಗಳ ನೆಲೆಯಲ್ಲಿ ಗುರುತಿಸಲು ಹೊಸ ಆಯೋಗವೊಂದನ್ನು ನೇಮಿಸಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ.**

ಸಚಿವ ಸಂಪುಟ ತನ್ನ ಹೊಸ ಸೂತ್ರದಲ್ಲಿ ಲಿಂಗಾಯತರು, ಒಕ್ಕಲಿಗರು ಸೇರಿದಂತೆ ಹಿಂದುಳಿದ ವರ್ಗಗಳ ಐದು ಶ್ರೇಣಿಯ ಗುಂಪುಗಳನ್ನು ಗುರುತಿಸಿ, ಇಂದೇ ಸರಕಾರಿ ಆಜ್ಞೆ ಹೊರಡಿಸಲಿದೆ. ಪ್ರಸಕ್ತ ಸರಕಾರಿ ಆಜ್ಞೆ ಮುಂದಿನ ಮೂರು ವರ್ಷಗಳಿಗೆ ಮಾತ್ರ ಜಾರಿಯಲ್ಲಿರುತ್ತದೆ.

ಇಂದು ನಡೆದ ಮಹತ್ವದ ಸಚಿವ ಸಂಪುಟದ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಸರಕಾರದ ನಿರ್ಧಾರವನ್ನು ಪ್ರಕಟಿಸಿದ ಸಮಾಜ ಕಲ್ಯಾಣ ಸಚಿವ ಜಿ. ಬಸವಣ್ಣಪ್ಪ ಮತ್ತು ಕಾನೂನು ಸಚಿವ ಎ. ಲಕ್ಷ್ಮೀಸಾಗರ್ ಅವರುಗಳು ವರದಿಗಾರರಿಗೆ ತಿಳಿಸಿದಂತೆ ಹೊಸ ಸೂತ್ರದಲ್ಲಿಯೂ ಶೇ. 68 ರಷ್ಟು ಮೀಸಲಾತಿಯ ಕ್ರಮ ಮುಂದುವರಿಸಲಾಗುವುದೆಂದರು.

ಸರಕಾರದ ಹೊಸ ಸೂತ್ರದಿಂದ ವೆಂಕಟಸ್ವಾಮಿ ವರದಿಯಿಂದ ಅನ್ಯಾಯಕ್ಕೀಡಾಗಿದ್ದ ಒಕ್ಕಲಿಗ ಮತ್ತಿತರ ಕೋಮುಗಳು ಹಾಗೂ ವರದಿಯಿಂದ ವಂಚಿತರಾಗಿದ್ದ ಲಿಂಗಾಯತ, ಬಂಟ ಮತ್ತಿತರ ಕೋಮುಗಳು ಸಂಪುಟ ಗುರುತಿಸಿರುವ ವಿವಿಧ ಶ್ರೇಣಿಯ ಗುಂಪುಗಳಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿ ಸೌಲಭ್ಯ ಮತ್ತು ಸವಲತ್ತುಗಳನ್ನು ಪಡೆಯಲು ಅರ್ಹವಾಗುತ್ತವೆ.

ಸರಕಾರ ಗುರುತಿಸಿರುವ ಈ ಐದು ಗುಂಪುಗಳಲ್ಲಿ ಮೊದಲನೆಯ 'ಎ' ಗುಂಪಿಗೆ ಆದಾಯದ ಮಿತಿ ಇಲ್ಲ. ಉಳಿದ ಮೂರು ಗುಂಪುಗಳಾದ ಬಿ. ಸಿ. ಡಿ. ಯಲ್ಲಿ ಬರುವ ಜನಾಂಗಗಳಲ್ಲಿನ ಜನರು ಹತ್ತು ಸಾವಿರಕ್ಕಿಂತ ಕಡಿಮೆ ವಾರ್ಷಿಕ ವರಮಾನವಿದ್ದರೆ ಮಾತ್ರ ಹಿಂದುಳಿದವರೆಂದು ಗುರುತಿಸಲ್ಪಡುವರು.

ಸರಕಾರ ಗುರುತಿಸಿರುವ 'ಇ' ಗುಂಪು ಆಗಿರುವ ಹಿಂದುಳಿದವರ ವಿಶೇಷ ವರ್ಗದಲ್ಲಿ ಬ್ರಾಹ್ಮಣರು, ವೈಶ್ಯರು, ಜೈನರು ಮತ್ತು ಮೊದಲಿಯಾರ್ ಜಾತಿಗಳು ಸೇರಲಿದ್ದು, ಇದರಲ್ಲಿ ಎಂಟು ಸಾವಿರಕ್ಕಿಂತ ಕಡಿಮೆ ವರಮಾನದ ಮಿತಿ ಇರುವವರಿಗೆ ಮಾತ್ರ ಹಿಂದುಳಿದವರ ಸವಲತ್ತುಗಳು ಲಭ್ಯವಾಗಲಿವೆ.

ವರದಿಯ ಬಗ್ಗೆ ನಡೆದ ವ್ಯಾಪಕ ಚರ್ಚೆ, ವಿವಿಧ ಜಾತಿಗಳ ಜನರಿಂದ ವ್ಯಕ್ತವಾದ ತೀವ್ರ ವಿರೋಧ, ಪ್ರತಿಭಟನೆ ಹಿನ್ನೆಲೆಯಲ್ಲಿ ಸರಕಾರ ಹೊಸ ಸೂತ್ರರೂಪಿಸಲು ನಿರ್ಧರಿಸಿತು ಎಂದು ಸಚಿವ ಜಿ. ಬಸವಣ್ಣಪ್ಪ ತಿಳಿಸಿದರು.

ಸಚಿವ ಸಂಪುಟ, ವೆಂಕಟಸ್ವಾಮಿ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿದೆ. ಅದರ ಮೂಲ ಆಶಯವನ್ನು ತೆಗೆದುಕೊಂಡು, ಸುಪ್ರೀಂಕೋರ್ಟು ನೀಡಿದ ತೀರ್ಮಾನ ಹಾಗೂ ಮಾರ್ಗದರ್ಶಕ ಸೂತ್ರಗಳನ್ನೂ, ಕಾನೂನು ಇಲಾಖೆಯ ಸಲಹೆ ಪಡೆದು ಹೊಸ ಸೂತ್ರ ರೂಪಿಸಿದೆ ಎಂದು ಅವರು ವಿವರಿಸಿದರು.

ಭಾರತದ ಸಂವಿಧಾನದ 15 (4 ಮತ್ತು 16 (4) ನೇ ವಿಧಿಗಳನ್ವಯ ಕ್ರಮವಾಗಿ ಶೈಕ್ಷಣಿಕ ಅವಕಾಶಗಳು ಮತ್ತು ಉದ್ಯೋಗ ನೀಡಿಕೆಯಲ್ಲಿನ ಮೀಸಲಾತಿಗೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಹಿತರಕ್ಷಣೆಯ ಗುರುತರ ಜವಾಬ್ದಾರಿ ಸರಕಾರದ ಮೇಲಿದ್ದು ಅದನ್ನು ರಕ್ಷಿಸುವ ದೃಷ್ಟಿಯಿಂದ ಸರಕಾರ ಹೊಸ ಸೂತ್ರವೊಂದನ್ನು ರೂಪಿಸುವುದು ಅಗತ್ಯವೆಂದು ಅವರು ಸ್ಪಷ್ಟಪಡಿಸಿದರು.

ಸಂವಿಧಾನದ 16 (4) ವಿಧಿಯನ್ವಯ ನೀಡಲಾಗುವ ಶೇ. 50 ರಷ್ಟು ಮೀಸಲಾತಿಯ ಸೌಲಭ್ಯವನ್ನು ಸಾರ್ವಜನಿಕ ಮತ್ತು ಸರಕಾರದಿಂದ ಅನುದಾನ ಪಡೆಯುವ ಖಾಸಗಿ ಸಂಸ್ಥೆಗಳಿಗೂ ಸರಕಾರದ ಈ ಹೊಸ ಸೂತ್ರ ಅನ್ವಯವಾಗುವುದು.

ಹೊಸ ಸೂತ್ರದಲ್ಲಿ, ಪರಿಶಿಷ್ಟರ ಶೇ. 18 ರ ಮೀಸಲಾತಿಪ್ರಮಾಣವನ್ನುಳಿದಂತೆ, ಹೊಸ ಸೂತ್ರದಂತೆ, ಗ್ರೂಪ್–ಎ, ವಿಧಿ 15 (4)ಮತ್ತು ವಿಧಿ (164)ಎರಡರಲ್ಲೂ ಶೇ. ಐದರಷ್ಟು ಸವಲತ್ತು ಪಡೆದರೆ, ಗ್ರೂಪ್-ಬಿ ವಿಧಿ 15 (4) ರಲ್ಲಿ ಶೇ. 15 ರಷ್ಟು ಮೀಸಲಾತಿ ಸೌಲಭ್ಯ ಪಡೆದು, ವಿಧಿ 16(4)ರಲ್ಲಿಶೇ 13 ರಷ್ಟು ಸೌಲಭ್ಯ ಪಡೆಯುತ್ತಿದೆ. ಗ್ರೂಪ್–ಸಿ 15 (4) ಮತ್ತು 16 (4) ಎರಡರಲ್ಲೂ ಶೇ. 16 ರಷ್ಟು ಸೌಲಭ್ಯ ಪಡೆಯುತ್ತಿದೆ. ಗ್ರೂಪ್–ಡಿ 15 (4) ರಲ್ಲಿ ಶೇ. 9 ರಷ್ಟು ಸೌಲಭ್ಯ ಪಡೆದರೆ, 16 (4)ರಲ್ಲಿ ಶೇ. 11 ರಷ್ಟು ಸೌಲಭ್ಯ ಪಡೆಯುತ್ತದೆ.

## ವಿಶುಕುಮಾರ್ ಪತ್ನಿಗೆ ಮಾಸಾಶನ

(ಮುಂಗಾರು ವರದಿ)

ಬೆಂಗಳೂರು, ಅ. 7– ಕ್ಯಾನ್ಸರ್‌ನಿಂದ ಅಕಾಲಿಕ ಮರಣಕ್ಕೀಡಾದ ಖ್ಯಾತ ಕಾದಂಬರಿಕಾರ, ಚಲನಚಿತ್ರ ನಿರ್ದೇಶಕ ವಿಶುಕುಮಾರ್ ಅವರ ಪತ್ನಿ ವಿಜಯಲಕ್ಷ್ಮಿ ವಿಶುಕುಮಾರ್ ಅವರಿಗೆ ರಾಜ್ಯ ಸರಕಾರ ಮಾಸಿಕ ರೂ. 500 ಮಾಸಾಶನ ನೀಡಲು ಇಂದಿನ ಸಂಪುಟ ಸಭೆಯಲ್ಲಿ ನಿರ್ಧರಿಸಿತು.

## ಅಂಚೆ– ತಂತಿ ನೌಕರರ ಮುಷ್ಕರ ವಜಾ

ಮುಂಬೈ, ಅ. 7 – 34 ದಿನಗಳ ವೇತನಕ್ಕೆ ಸಮಾನವಾದ ಬೋನಸನ್ನು ನೀಡಲು ಕೇಂದ್ರ ಸರಕಾರ ಒಪ್ಪಿದುದರಿಂದಾಗಿ ಇಂದಿನಿಂದ ಆರಂಭವಾಗಬೇಕಾಗಿದ್ದ 22 ಲಕ್ಷಕ್ಕೂ ಹೆಚ್ಚಿನ ಅಂಚೆ ಮತ್ತು ತಂತಿ ಇಲಾಖೆಯ ನೌಕರರ ದೇಶವ್ಯಾಪಿ ಮುಷ್ಕರವನ್ನು ಹಿಂತೆಗೆದು ಕೊಳ್ಳಲಾಗಿದೆ.

ಮುಷ್ಕರಕ್ಕೆ ಕರೆ ನೀಡಿದ್ದ ಅಂಚೆ ಮತ್ತು ತಂತಿ ಇಲಾಖೆಯ ಕಾರ್ಮಿಕ ಸಂಘಗಳ ಒಕ್ಕೂಟವು ಹೇಳಿಕೆಯೊಂದರಲ್ಲಿ ಮುಷ್ಕರವನ್ನು ಹಿಂತೆಗೆದುಕೊಂಡಿರುವುದನ್ನು ಪ್ರಕಟಿಸಿದೆ.

## ರಾಜೀವ್–ಜೈಲ್ ಶೀತಲ ಯುದ್ಧ ವಾಜಪೇಯಿ ಕಳವಳ

ಕೊಚ್ಚಿ, ಅ. 7– "ಪ್ರಧಾನಿ ರಾಜೀವ ಗಾಂಧಿ ಮತ್ತು ರಾಷ್ಟ್ರಪತಿ ಜೈಲ್‌ಸಿಂಗ್ ನಡುವಿನ ಶೀತಲ ಯುದ್ಧ ಪ್ರಸ್ತುತ ಹೊಸ ತಿರುವನ್ನು ಪಡೆದಿರುವುದರ ಬಗ್ಗೆ ಭಾರತೀಯ ಜನತಾ ಪಕ್ಷದ ನಾಯಕ ಅಟಲ್ ಬಿಹಾರಿ ವಾಜಪೇಯಿ ಇಂದು ಕಳವಳ ವ್ಯಕ್ತಪಡಿಸಿದರು.

ಥಕ್ಕರ್ ಆಯೋಗವನ್ನು ನೇಮಿಸಿದ ವರೇ ಆದ ರಾಷ್ಟ್ರಪತಿಗೆ ಅದರ ವರದಿಯನ್ನು ತೋರಿಸದಿರುವುದರಲ್ಲಿ "ಏನೇನೂ ನ್ಯಾಯವಿಲ್ಲ" ಎಂದು ಇಂದಿಲ್ಲಿ ಪತ್ರಿಕಾಗೋಷ್ಠಿಯೊಂದರಲ್ಲಿ ವಾಜಪೇಯಿ ಹೇಳಿದರು.

## ಬೆರೂತ್: ಭಾರತದ ದೂತಾವಾಸಕ್ಕೆ ಸಿಕ್ಖರ ದಾಳಿ

ಲಂಡನ್, ಅ. 7– ಬೆರೂತ್‌ನಲ್ಲಿರುವ ಭಾರತೀಯ ದೂತಾವಾಸದ ಮೇಲೆ ನಿನ್ನೆ ಸುಮಾರು 50 ಮಂದಿ ಸಿಕ್ಖರು ದಾಳಿ ನಡೆಸಿ ದೂತವಾಸದ ಧ್ವಜವನ್ನು ಕಿತ್ತು ಹಾಕಿದರಲ್ಲದೆ ಪ್ರಧಾನಿ ರಾಜೀವ ಗಾಂಧಿಯವರ ಭಾವಚಿತ್ರವನ್ನು ನಾಶಗೈದರೆಂದು ಬಿಬಿಸಿ ಇಂದು ವರದಿ ಮಾಡಿದೆ.

ದಾಳಿಕಾರರು ದೂತಾವಾಸದ ಕಾವಲುಗಾರರು ಮತ್ತು ನೌಕರರ ಜತೆ ಘರ್ಷಣೆ ನಡೆಸಿದರು.

ದಾಳಿಕಾರರಿಗೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ಪೂರ್ಣಗೊಳಿಸುವಲ್ಲಿ ಆದ ವಿಳಂಬಕ್ಕಾಗಿ ದಾಳಿ ನಡೆಸಲಾಯಿತೆನ್ನಲಾಗಿದೆ. ಆಂತರಿಕ ಭದ್ರತಾ ಪಡೆಯ ಆಗಮನವನ್ನು ಅನುಸರಿಸಿ ಪರಿಸ್ಥಿತಿ ನಿಯಂತ್ರಣಕ್ಕೆ ಬಂತು.

# ಶೋಷಿತರಿಗೆ ನ್ಯಾಯ ಎಲ್ಲಿ: ವೆಂಕಟಸ್ವಾಮಿ

(ಮುಂಗಾರು ವರದಿ)

ಬೆಂಗಳೂರು, ಅ. 7– 'ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. 92ರಷ್ಟು ಜನರಿಗೆ ಮೀಸಲಾತಿ ದೊರಕಿಸಿ ಕೊಡುವುದಾದರೆ, ಶೋಷಣೆಗೊಳಗಾದ ಜನರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವುದಾದರೂ ಹೇಗೆ ಸಾಧ್ಯ?' ಎಂದು ಎರಡನೇ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಟಿ. ವೆಂಕಟಸ್ವಾಮಿ ಪ್ರಶ್ನಿಸಿದರು.

ತಮ್ಮ ವರದಿಯನ್ನು ಸರಕಾರ ಒಪ್ಪದಿರುವ ಬಗ್ಗೆ ಮತ್ತು ಸಂಪುಟ ರೂಪಿಸಿರುವ ಹೊಸಸೂತ್ರದ ಸಂಬಂಧದಲ್ಲಿ 'ಮುಂಗಾರು' ಜೊತೆ ಮಾತನಾಡುತ್ತಿದ್ದ ಅವರು, ಸರಕಾರದ ಪ್ರಸಕ್ತ ನಿರ್ಧಾರದಿಂದ ತಮಗೆ ಸಂತೋಷವೂ ಆಗಿಲ್ಲ. ವಿಷಾದವೂ ಆಗಿಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯ ಸಂಪುಟ ರೂಪಿಸಿರುವ ಹೊಸ ಸೂತ್ರದ ಬಗ್ಗೆ ಹಿಂದುಳಿದ ವರ್ಗಗಳು ನ್ಯಾಯಾಲಯದಲ್ಲಿ ಪ್ರಶ್ನಿಸುವುದು ಖಚಿತ. ನ್ಯಾಯಾಲಯದಲ್ಲಿ ಈ ಸೂತ್ರ ಯಾವುದೇ ಕಾರಣದಿಂದ ಊರ್ಜಿತಗೊಳ್ಳುವುದಿಲ್ಲ ಎಂದವರು ಅಭಿಪ್ರಾಯಪಟ್ಟರು.

ಜನಸಂಖ್ಯೆಯ ಶೇ. 92ರಷ್ಟು ಜನರಿಗೆ ಹಿಂದುಳಿದ ವರ್ಗಗಳ ಸವಲತ್ತು ನೀಡುವುದಾದರೆ ಹಿಂದುಳಿದವರು ಎನ್ನುವವರಾದರೂ ಎಲ್ಲಿದ್ದಾರೆ? ಇದು ಸಂವಿಧಾನದ ಪ್ರಕಾರ ಸಮ್ಮತಿಗೆ ಅರ್ಹವಾದ ಸೂತ್ರವಾಗುವುದಿಲ್ಲ ಎಂದವರು ಸ್ಪಷ್ಟಪಡಿಸಿದರು.

ಎರಡನೇ ಹಿಂದುಳಿದ ವರ್ಗಗಳ ಆಯೋಗದ ವರದಿ ಕೇವಲ ವೆಂಕಟಸ್ವಾಮಿ ವರದಿಯಲ್ಲ. ಆಯೋಗದಲ್ಲಿದ್ದ 15 ಸದಸ್ಯರ ವೈಕಿ ಹತ್ತು ಸದಸ್ಯರ ಅಭಿಪ್ರಾಯ ಮತ್ತು ಆಶಯಗಳನ್ನು ಒಳಗೊಳಿಸಿ ರೂಪಿಸಿದ ವರದಿ ಎಂದು ಅವರು ವಿವರಿಸಿದರು.

ತಮ್ಮ ವರದಿಯಲ್ಲಿ ಒಟ್ಟು ಜನಸಂಖ್ಯೆಯ ಶೇ. 33ರಷ್ಟು ಜನರನ್ನು, ಅಂದರೆ ಒಟ್ಟು ಜನಸಂಖ್ಯೆಯ ಮೂರನೇ ಒಂದು ಭಾಗದ ಜನರಿಗೆ ಶೇ. 27ರಷ್ಟು ಮೀಸಲಾತಿ ನೀಡಲಾಗಿತ್ತು. ಇದೊಂದು ವಸ್ತುನಿಷ್ಠ, ಸಂವಿಧಾನ ಬದ್ಧ ಶಿಫಾರಸಾಗಿತ್ತು ಎಂದವರು ತಿಳಿಸಿದರು.

ಸುಪ್ರೀಂ ಕೋರ್ಟ್ ತನ್ನ ಮಾರ್ಗದರ್ಶಕ ಸೂತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಹೋಲಿಕೆಯಾಗುವ ಹಾಗೂ ಸಮಾನಾಂತರವಾದ ರೀತಿ ಹಿಂದುಳಿದ ವರ್ಗಗಳನ್ನು ಗುರುತಿಸಬೇಕೆಂದು ಸಲಹೆ ಮಾಡಿತ್ತು. ಅದರಂತೆ ತಾವು ಕಾರ್ಯ ನಿರ್ವಹಿಸಿರುವುದಾಗಿ ಅವರು ಹೇಳಿದರು.

ತಮಗೆ ವಹಿಸಿದ್ದ ಜವಾಬ್ದಾರಿಯನ್ನು ನಿರ್ವಚನೆಯಿಂದ ನಿರ್ವಹಿಸಿದ್ದಾಗಿ ಹೇಳಿದ ವೆಂಕಟಸ್ವಾಮಿ, ತಮ್ಮ ವರದಿಯನ್ನು ಸುರೂಪ ಅಥವಾ ಕುರೂಪ ಅಥವಾ ವಿರೂಪ ಎಂದು ಕರೆಯುವ ಹಕ್ಕು ಸರಕಾರಕ್ಕಿದೆ. ವರದಿ ಒಪ್ಪುವ, ತಿರಸ್ಕರಿಸುವ, ಪುನರ್‌ರೂಪಿಸುವ ಹಕ್ಕು ಸರಕಾರಕ್ಕಿದೆ. ಹೀಗಿರುವಾಗ ತಮ್ಮ ವರದಿಯನ್ನು ಸರಕಾರ ಒಪ್ಪದಿರುವ ಬಗ್ಗೆ ತಮ್ಮ ಆಕ್ಷೇಪವಿಲ್ಲ ಎಂದು ಹೇಳಿದರು.

# ಶೇಕಡಾವಾರು ಮೀಸಲಾತಿ

(ಮುಂಗಾರು ವರದಿ)

ಬೆಂಗಳೂರು, ಅ. 7. ಸಂವಿಧಾನದ ವಿಧಿ 15(4) ರಂತೆ ಹೊಸಮೀಸಲಾತಿ ಸೂತ್ರದಲ್ಲಿ ಶೈಕ್ಷಣಿಕ ಅವಕಾಶಗಳಿಗಾಗಿ ಗುರುತಿಸಲಾಗಿರುವ ಇತರ ಹಿಂದುಳಿದ ಜಾತಿಗಳು, ಶೇಕಡಾವಾರು ಜನಸಂಖ್ಯೆ, ಮೀಸಲಾತಿ ಪ್ರಮಾಣ ಹಾಗೂ ಸವಲತ್ತಿನ ಶೇಕಡಾವಾರು ವ್ಯಾಪ್ತಿ ಈ ಕೆಳಕಂಡಂತಿದೆ.

| ಗುಂಪು ಹಾಗೂ ಜಾತಿಗಳು | ಶೇಕಡಾವಾರು ಜನಸಂಖ್ಯೆ |
| --- | --- |
| 'ಎ'ಗುಂಪು | |
| ಹಾಲಿ ಇರುವ | |
| ಹಿಂದುಳಿದ ವಂಗಡಗಳು | 4.43 |
| ಮೇದಾರ | 0.10 |
| ಸಿದ್ದಿ | 0.01 |
| ಹಾಲಕ್ಕಿ ಒಕ್ಕಲು | 0.19 |
| ಒಟ್ಟು | 4.73 |
| ಶೇಕಡಾವಾರು ಮೀಸಲಾತಿ | 5 |
| ಸವಲತ್ತಿನ ಶೇಕಡಾವಾರುವ್ಯಾಪ್ತಿ | 105 |
| 'ಬಿ' ಗುಂಪು | |
| ಹಾಲಿ ಬಿ.ಸಿ.ಟಿ. | |
| (ಹಾಲಕ್ಕಿ ಒಕ್ಕಲು ಹೊರತು) | 13.82 |
| ಈಡಿಗ | 2.54 |
| ಹೊಸ ಕೋಮುಗಳು. | |
| ಜಟ್ಟಿ | 0.01 |
| ಗಟ್ಟಿ | 0.01 |
| ಗುಡಿಗಾರ | 0.01 |
| ತೇವರ್ | 0.01 |
| ಬಾಂಧಿ | 0.02 |
| ಹಾಲಿ ಬಿ.ಸಿ.ಎಂ. ಗುಂಪು | |
| ಬಲಿಜ | 1.33 |
| ದೇವಾಡಿಗ | 0.29 |
| ನಾಯಿಂದ | 0.64 |
| ಗಾಣಿಗ | 0.45 |
| ರಜಪೂತ | 0.15 |
| ಸಾತಾನಿ | 0.06 |
| ಒಟ್ಟು | 19.34 |
| ಶೇಕಡಾವಾರು ಮೀಸಲಾತಿ | 15 |
| ಸವಲತ್ತಿನ ಶೇಕಡಾವಾರು ವ್ಯಾಪ್ತಿ | 75.5 |
| 'ಸಿ' ಗುಂಪು | |
| ಹಾಲಿ ಬಿ. ಸಿ. ಎಂ. ಗುಂಪು | |
| 1 ಮುಸ್ಲಿಂ | 10.97 |
| 2 ಒಕ್ಕಲಿಗ | 11.68 |
| 3 ಕಮ್ಮ | 0.25 |
| 4 ದರ್ಜಿ | 0.33 |
| 5 ದೇವಾಂಗ | 0.74 |
| 6 ನೆಯ್ಗೆ | 0.65 |
| 7 ಪಟಗಾರ | 0.04 |

(ಕೊನೆಯ ಪುಟಕ್ಕೆ)

## ಶಿವಾಜಿ ಗಣೇಶನ್ ಲಘು ಹೃದಯಾಘಾತ

ಕೊಯಮುತ್ತೂರು, ಅ. 7– ಖ್ಯಾತ ತಮಿಳು ಚಿತ್ರನಟ ಶಿವಾಜಿ ಗಣೇಶನ್ ಅವರು ಲಘು ಹೃದಯಾಘಾತಕ್ಕೊಳಗಾಗಿದ್ದು ಅವರನ್ನು ಇಂದು ಬೆಳಗ್ಗೆ ಖಾಸಗಿ ಆಸ್ಪತ್ರೆಯೊಂದಕ್ಕೆ ಸೇರಿಸಲಾಯಿತು. ನಿನ್ನೆ ರಾತ್ರಿ ಕುನೂರಿನಲ್ಲಿ ಚಿತ್ರೀಕರಣ ಒಂದರಲ್ಲಿ ಭಾಗವಹಿಸುತ್ತಿದ್ದಾಗ ಅವರಿಗೆ ಹೃದಯಾಘಾತ ಸಂಭವಿಸಿತ್ತು.

'ಅವರ ಪರಿಸ್ಥಿತಿ ಗಂಭೀರವಾಗೇನೂ ಇಲ್ಲ. ಅವರು ವಿಶ್ರಾಂತಿ ಪಡೆಯುತ್ತಿದ್ದಾರೆ ಎಂದು ಕೆ.ಜಿ. ಆಸ್ಪತ್ರೆಯ ನಿರ್ದೇಶಕರಾದ ಭಕ್ತವತ್ಸಲಮ್ ಸುದ್ದಿಗಾರರಿಗೆ ತಿಳಿಸಿದರು.

ಆಸ್ಪತ್ರೆಗೆ ಬಂದಾಗ ದಣಿದವರಂತೆ ಕಾಣುತ್ತಿದ್ದ ಶಿವಾಜಿ ತಾವಾಗೇ ನಡೆದು ಬಂದರು. ಈಗ ಕೆಲವು ದಿನಗಳಿಂದ ಅವರು ಪರಿಪಾಲಿಸುತ್ತಾ ಬಂದಿರುವ ಬಿಗಿ ಪಥ್ಯದಿಂದಾಗಿ ಅವರು ಅಸ್ವಸ್ಥರಾಗಿರಬಹುದು. ಅವರ ಮಾಂಸಗಳು ಬಹಳ ದುರ್ಬಲವಾಗಿದ್ದರೂ ಅವರು ಪೂರ್ಣ ಜಾಗೃತರಾಗಿದ್ದಾರೆ. ಒಂದೆರಡು ದಿನಗಳಲ್ಲಿ ಅವರನ್ನು ಬಿಡುಗಡೆ ಮಾಡಬಹುದೆಂದು ಡಾ. ಭಕ್ತವತ್ಸಲಂ ಹೇಳಿದ್ದಾರೆ.

# ಯೋಧರನ್ನು ಸೃಷ್ಟಿಸುವ ತಾಂಬರಮ್, ಆವಡಿ ಕೇಂದ್ರಗಳು

(ಮುಂಗಾರು ವರದಿ)

ಬೆಂಗಳೂರು, ಅ. 7—ಯುದ್ಧ ಭೂಮಿಯಲ್ಲಿ ಶಸ್ತ್ರ ಸನ್ನದ್ಧರಾಗಿ ಶತ್ರು ದಾಳಿಯನ್ನು ಯಶಸ್ವಿಯಾಗಿ ಎದುರಿಸುವ ಸುಸಜ್ಜಿತ ಪಡೆಯ ನಿರ್ಮಾಣದ ಹಿಂದೆ, ಹಲವು ಹತ್ತು ರೀತಿಯ ತರಬೇತಿ ಪರಿಶ್ರಮ ಹಾಗೂ ಹಲವಾರು ಮುಂದಿಯ ದುಡಿತ ಪ್ರಮುಖ ಪಾತ್ರ ವಹಿಸುತ್ತದೆ.

ಮೋಡಗಳ ನಡುವೆ ರಾಜ ಠೀವಿಯಿಂದ ಘೋರ್ಗರೆಯುತ್ತಾ ಧಾವಿಸುವ ವಿಮಾನ ನೋಡುಗರಿಗೊಂದು ಸಾಹಸ ಸೊಬಗಿನ ಪ್ರತೀಕವಾಗಿರುತ್ತದೆ. ಇಂತಹ ವಿಮಾನವೊಂದರ ನಿರ್ಮಾಣ, ಚಾಲನೆಯ ಹಿಂದೆ ಅದೆಷ್ಟೋ ಶಕ್ತಿ–ಯುಕ್ತಿಗಳ ನಿರಂತರ ಪರಿಶ್ರಮ, ದುಡಿಮೆ, ಬುದ್ಧಿಮತ್ತೆ ಬಹಳಷ್ಟಾಗಿರುವುದು ಬಹಳ ಮಂದಿಯ ಅರಿವಿಗೆ ಬಂದಿರುವುದಿಲ್ಲ. ಯುದ್ಧ ಭೂಮಿಯಲ್ಲಿ ಶತ್ರು ಪಡೆಯ ವಿರುದ್ಧ ಸಾಹಸದಿಂದ ಹೋರಾಟ ನಡೆಸುವ "ಯೋಧ" ಎನ್ನುವ ಮೂರ್ತಿಯ ಕೆತ್ತನೆಯ ಹಿಂದೆ ಹಲವಾರು ಶಿಲ್ಪಿಗಳ ಕೌಶಲ್ಯ ಕುಸುರಿಗೆಲಸದ ಶ್ರಮ ಅಡಗಿದೆ.

ಇಂತಹ ಪರಿಶ್ರಮ, ಬುದ್ಧಿಮತ್ತೆಗಳ ವಿನಿಯೋಗದಿಂದ "ಯೋಧ"ರನ್ನು ಸೃಷ್ಟಿಸುವ ಕೇಂದ್ರಗಳಲ್ಲಿ ಮದ್ರಾಸಿಗೆ 35 ಕಿ. ಮಿ. ದೂರದ "ಆವಡಿ"ಯ ಏರ್ ಫೋರ್ಸ್ ಸ್ಟೇಶನ್ ವಾಯು ಪಡೆಯಲ್ಲಿ ಗಣನೀಯ ಪಾತ್ರ ವಹಿಸುತ್ತಿದೆ. ಇಲ್ಲಿರುವ ಯಾಂತ್ರಿಕ ಸಾರಿಗೆ ತರಬೇತಿ ಸಂಸ್ಥೆ ಯಾಂತ್ರಿಕ ಸಾರಿಗೆ ತಜ್ಞರು ಹಾಗೂ ಚಾಲಕರಿಗೆ ತರಬೇತಿ ನೀಡುವ ಒಂದು ಪ್ರಾತಿನಿಧಿಕ ಸಂಸ್ಥೆಯಾಗಿದೆ.

ಇಂದು ಈ ಕೇಂದ್ರಕ್ಕೆ ಭೇಟಿ ನೀಡಿದ ಪತ್ರಕರ್ತರಿಗೆ ವಾಯುಪಡೆಯ ಕೇಂದ್ರದ ಏರ್ ಆಫೀಸರ್ ಕಮಾಂಡಿಂಗ್, ಏರ್ ಕಮ್ಮಡೋರ್ ಎಚ್. ಸಪ್ರತಿ ಕೇಂದ್ರದ ವಿವಿಧ ಚಟುವಟಿಕೆಗಳನ್ನು ವಿವರಿಸಿದರೆ, ವಿಂಗ್ ಕಮಾಂಡರ್ ವಿ. ಪಿ. ಸತೀಶ್ ತರಬೇತಿಯ ಸಂದರ್ಭದ ವಿವಿಧ ಹಂತಗಳನ್ನು ವಿವರಿಸಿದರು.

ಆವಡಿಯಲ್ಲಿರುವ ಸಾರಿಗೆ ತಾಂತ್ರಿಕ ತರಬೇತಿ ಕೇಂದ್ರ ಚಾಲಕರಿಗೆ ತರಬೇತಿ ನೀಡುವ ಕಾರ್ಯದಲ್ಲಿ ಅತ್ಯಂತ ನಿರ್ಣಾಯಕ ಹಾಗೂ ಮಹತ್ವಪೂರ್ಣ ಪಾತ್ರ ವಹಿಸುತ್ತಿದೆ.

'ತಾಂಬರಮ್' ಮದ್ರಾಸಿನ ಮತ್ತೊಂದು ವಾಯುಪಡೆಯ ಕೇಂದ್ರ, ಭಾರತೀಯ ವಾಯುಪಡೆಯ ಅತೀ ದೊಡ್ಡ ತರಬೇತಿ ಸಂಸ್ಥೆಗಳಲ್ಲಿ ಒಂದಾಗಿದೆ. ವಿಸ್ತಾರ ಪ್ರದೇಶದಲ್ಲಿ ಇದು ವ್ಯಾಪಿಸಿದೆ.

ಭಾರತೀಯ ವಾಯುಪಡೆಯ ಮುಖ್ಯ ಕಚೇರಿಯ ತರಬೇತಿ ಕಮಾಂಡ್‌ನ ನಿಯಂತ್ರಣ ಹಾಗೂ ಆದೇಶದಲ್ಲಿದೆ. ಇಲ್ಲಿ ವೈಮಾನಿಕ ಚಾಲನೆ ತರಬೇತಿಗೆ ಸಂಬಂಧಿಸಿದ ಮೂರು ಮುಖ್ಯ ಘಟಕಗಳಿವೆ. ಇದರಲ್ಲಿ ವೈಮಾನಿಕ ಚಾಲಕರ ತರಬೇತಿಗಾರರ ಶಾಲೆ ವಿಮಾನ ಚಾಲಕರ ತರಬೇತಿ ಜತೆಗೆ ವೈಮಾನಿಕ ತರಬೇತಿಗಾರರಿಗೂ ತರಬೇತಿ ನೀಡುವುದು.

"ತಾಂತ್ರಿಕ ತರಬೇತಿ ಸಂಸ್ಥೆ" ವಾಯುಪಡೆಯ ತಂತ್ರಗಾರಿಕೆ ತರಬೇತಿ ನೀಡುತ್ತದೆ. ಏರ್‌ಫ್ರೇಮ್, ಎಂಜಿನ್ ಹಾಗೂ ಆಯುಧ ಸಂಬಂಧಿಸಿದ ವೈಮಾನಿಕ ತಂತ್ರಜ್ಞತೆಯ ಬಗ್ಗೆ ಇಲ್ಲಿ ತರಬೇತಿ ನೀಡಲಾಗುತ್ತಿದೆ. "ಯಂತ್ರಗಾರ ತರಬೇತಿ ಸಂಸ್ಥೆ" ಇದು ವಾಯುಪಡೆಯ ಮತ್ತೊಂದು ಮುಖ್ಯ ತರಬೇತಿ ಕೇಂದ್ರ. ಇಲ್ಲಿ ವೈಮಾನಿಕ ನೆಲೆಯ ರಕ್ಷಣಾ ನಿರ್ವಾಹಕ, ಹವಾಮಾನ ಅಧ್ಯಯನ, ಸಹಾಯಕ ಹಾಗೂ ಯಂತ್ರಗಾರ ತಾಂತ್ರಿಕ ಕುಶಲಿಗರನ್ನು ತಯಾರು ಮಾಡುವುದಕ್ಕೆ ಸಂಬಂಧಿಸಿದಂತೆ ತರಬೇತಿ ನೀಡಲಾಗುತ್ತದೆ.

ರಾಷ್ಟ್ರದಲ್ಲಿ ನಡೆಯುವ ಆಂತರಿಕ ಘರ್ಷಣೆ, ಪ್ರವಾಹ ಪರಿಹಾರ ಹಾಗೂ ಕ್ಷಾಮ ಪೀಡಿತ ಪ್ರದೇಶಗಳ ಜನರಿಗೆ ನೆರವು ನೀಡುವ ಕೆಲಸವನ್ನು ಈ ಕೇಂದ್ರ ಕೈಗೆತ್ತಿಕೊಳ್ಳುತ್ತದೆ.

**ವಿಮಾನ ಚಾಲಕ ತರಬೇತಿ ಶಾಲೆ**

ಪ್ರಸಕ್ತ ವೈಮಾನಿಕ ಚಾಲನ ತರಬೇತಿ ಕೇಂದ್ರ 1948ರಲ್ಲಿ ಅಂಬಾಲದಲ್ಲಿ ಸ್ಥಾಪನೆಗೊಂಡಿತು. ನಂತರ 1953ರಲ್ಲಿ ತಾಂಬರಮ್‌ನಲ್ಲಿರುವ ವಾಯುಪಡೆಯ ಕೇಂದ್ರಕ್ಕೆ ವರ್ಗಾಯಿಸಲ್ಪಟ್ಟಿತು. ಈ ಘಟಕ ಪ್ರತಿ ವರ್ಷ ಸರ್ವ ಉದ್ದೇಶಗಳ ಎರಡು ವೈಮಾನಿಕ ಚಾಲಕರ ತರಬೇತಿದಾರರ ತರಗತಿಗಳನ್ನು ನಡೆಸುತ್ತದೆ.

ವೈಮಾನಿಕ ತರಬೇತಿದಾರರ ಶಾಲೆ ವೈಮಾನಿಕ ಹೋರಾಟದ ತಾಂತ್ರಿಕತೆಗೆ ಹಾಗೂ ಪರಿಣತಿ ವೃದ್ಧಿಪಡಿಸುವ ದಿಸೆಯಲ್ಲಿ ಅಗ್ರಗಣ್ಯ ಸ್ಥಾನದಲ್ಲಿದೆ. ಗ್ರೂಪ್ ಕ್ಯಾಪ್ಟನ್ ಶ್ರೇಣಿಯ ಅಧಿಕಾರಿಯೊಬ್ಬರು ಈ ಘಟಕದ ಆಡಳಿತ ನಿರ್ವಹಿಸುತ್ತಾರೆ.

**ತಾಂತ್ರಿಕ ತರಬೇತಿ ಸಂಸ್ಥೆ**

ತಾಂತ್ರಿಕ ಪರಿಣತಿಗೆ ತರಬೇತಿ ನೀಡುವ ದೃಷ್ಟಿಯಿಂದ 1935ರಲ್ಲಿ ಅಂಬಾಲದಲ್ಲಿ ತಾಂತ್ರಿಕ ಶಾಲೆಯನ್ನು ಆರಂಭಿಸಲಾಯಿತು. ಅಂದಿನಿಂದ ತಾಂತ್ರಿಕ ತರಬೇತಿ ಹಾಗೂ ಆಯ್ಕೆ ಮಾರ್ಗ ಗಣನೀಯವಾಗಿ ಬದಲಾವಣೆ ಹೊಂದಿತು. ಅಂತಿಮವಾಗಿ 1947ರ ಫೆಬ್ರವರಿಯಲ್ಲಿ ತಾಂಬರಮ್‌ನಲ್ಲಿ ಎರಡನೆಯ ಭೂ ತರಬೇತಿ ಶಾಲೆ ಅಸ್ತಿತ್ವಕ್ಕೆ ಬಂದಿತ್ತು. 1980ರಲ್ಲಿ ಇದಕ್ಕೆ ತಾಂತ್ರಿಕ ತರಬೇತಿ ಸಂಸ್ಥೆ ಎಂದು ಪುನರ್ ನಾಮಕರಣ ಮಾಡಲಾಯಿತು. ಈ ಘಟಕವನ್ನು ತಾಂತ್ರಿಕ ತರಬೇತಿ ಸಂಸ್ಥೆ ಮತ್ತು ಕಾರ್ಖಾನೆಗಾರ ತರಬೇತಿ ಸಂಸ್ಥೆ ಎಂದು 1986ರಲ್ಲಿ ವಿಭಜಿಸಲಾಯಿತು. ವೈಮಾನಿಕ ತಂತ್ರಜ್ಞತೆಗೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಈಘಟಕಗಳಲ್ಲಿ 81 ವಾರಗಳ ತರಬೇತಿ ನೀಡಲಾಗುವುದು.

ತಾಂಬರಮ್‌ನಲ್ಲಿರುವ ವಾಯುಪಡೆಯ ಈ ಘಟಕ ವಾಯುಪಡೆಯ ಗುಣಾತ್ಮಕ ಬೆಳವಣಿಗೆ ಹಾಗೂ ಭವ್ಯ ಭವಿಷ್ಯದಲ್ಲಿ ಅತ್ಯಂತ ವೈಶಿಷ್ಟ್ಯಪೂರ್ಣ ಹಾಗೂ ಪ್ರಾಮುಖ್ಯ ಪಾತ್ರ ವಹಿಸಿದೆ. ಈಗ ಅಸ್ತಿತ್ವದಲ್ಲಿರುವ ಹಾಗೂ ಭವಿಷ್ಯದಲ್ಲಿ ಕಂಡುಬರುವ ಭಾರತೀಯ ವಾಯುಪಡೆಯ ಶೋಧನೆಗಳನ್ನು ಸಮರ್ಥವಾಗಿ ನಿರ್ವಹಿಸುವ ದಿಸೆಯಲ್ಲಿ ವೈಮಾನಿಕ ನಿರ್ವಹಣೆ ಹಾಗೂ ತಂತ್ರಜ್ಞತೆಯನ್ನು ಸಮರ್ಥವಾಗಿ ನಿಭಾಯಿಸುವ ದಿಸೆಯಲ್ಲಿ ಕುಶಲ ಮಾನವ ಶಕ್ತಿಯನ್ನು ಸಜ್ಜುಗೊಳಿಸುವಲ್ಲಿ ಈಘಟಕ ನಿರ್ಣಾಯಕ ಹಾಗೂ ಗಣನೀಯ ಪಾತ್ರ ವಹಿಸಿದೆ.

ತುಮಕೂರು



## College of Fisheries Hostel

Mathsyanagar, Mangalore-575002

### TENDER NOTICE

Sealed quotations are invited from intending bidders for running the College hostel mess, having about 150 boarders, on contract basis. For details, please contact Dr. Rudra Shetty, Warden (Phone: Res. 27836, Off. 27898). The quotations should reach the Warden before 4-00 p.m., on 20-10-1986.

Sd/-
Director of Instruction,
College of Fisheries

## NEW MANGALORE PORT TRUST

Panambur, Mangalore-575 010

N.I.T. No. CDN/3/86-87. Dtd. 30-9-1986

Sealed tenders are re-invited from the registered and eligible contractors of N.M.P.T., State P.W.D., C.P.W.D., Railways and M.E.S. upto 4-00 p.m. on 16-10-1986 for the following work.

Name of work: Annual repairs and maintenance of rolling shutters of non-residential building inside Port security compound for the year 1986-87.

Appx. Amount of work : Rs. 64,075.00

E.M.D. : Rs. 1,602.00

The tenders will be opened on the same day at 4-15 p.m. The E.M.D. in any of the form specified in the tender Schedule should be deposited and receipt enclosed with the tender. The conditions and tender forms can be had from this office from 6-10-1986 upto 1.00 p.m., on 15-10-1986 on payment of Rs. 50/- to the Financial Adviser, and Chief Accounts Officer, N.M.P.T.. Tender forms will be issued only on production of Registration and Income Tax Clearance Certificates.

Sd/-
Executive Engineer, Constn. Dn. I.



ಬೇಕಾಗಿದ್ದಾರೆ: [illegible] ವ್ಯಾಪಾರಕ್ಕೆ ... ದಿನಾಂಕ 1-11-86ರೊಳಗೆ ... ಕೊನೆ ದಿನಾಂಕ–2–11–1986 ಘಂಟೆ 3ಕ್ಕೆ ... ಮಂಗಳೂರು–574 219.

ಬೇಕಾಗಿದ್ದಾರೆ: ... 15 ದಿನ ದೊಳಗೆ ... ಬೆಳ್ತಂಗಡಿ, ಉಡುಪಿ–576 101.

ಪ್ರಕಟಣೆ: ನವರಾತ್ರಿ ಪೂಜಾ ಮಹೋತ್ಸವ ... ದಿನಾಂಕ 4–10–1986ರಿಂದ 12–10–1986ರ ... ದೇವಸ್ಥಾನ ... (ಉ.ಕ.)–581 320

ಕಳೆದುಹೋಗಿದೆ: MYY 7120ರ ... ಪ ... ಕುಂದಾಪುರ ದ. ಕ.

## ಪುತ್ತೂರಿನ ಮಹಾ ಜನರಲ್ಲಿ ನಮ್ರ ವಿನಂತಿ

ತಾರೀಕು 24–9–86 ರಲ್ಲಿ ಪುತ್ತೂರಿನ ... ತಾರೀಕು 28–9–86 ರಲ್ಲಿ ... [illegible]

... 124.5 ... 1905 ... 10–118 ... 15–12–1979 ... 95/79–80 ... [illegible]

1905ರ ... [illegible]

[illegible]

5–10–1986 ರ ... [illegible]

ಶ್ರೀ ... ಪುತ್ತೂರು

[illegible]

# ಬಣ್ಣದ ಮಹಾಲಿಂಗರಿಗೆ ಸನ್ಮಾನ
# ನೆನಪಿನಂಗಳದಲ್ಲಿ ಚಿರಸ್ಥಾಯಿ: ಯಕ್ಷಗಾನದ ಬಣ್ಣದ ವೇಷ

ಮೂಲ್ಕಿ, ಅ. 7– ಯಕ್ಷಗಾನ ಕಲಾ ವೈಭವವನ್ನು ಪ್ರೇಕ್ಷಕನ ಮನಃಪಟಲದಲ್ಲಿ ಅಚ್ಚೊತ್ತಿ ಅವರ ಸವಿಯನ್ನು ಸದಾ ಆಸ್ವಾದಿಸುವಂತೆ ಮಾಡುವುದು ಬಣ್ಣದ ವೇಷದ ವೈಶಿಷ್ಟ್ಯವಾಗಿದೆಯೆಂದು ಶಿಂಪಿ ತಿಟ್ಟಿನ ಹೆಸರಾಂತ ಯಕ್ಷಗಾನ ಕಲಾವಿದ ಶೇಣಿಗೋಪಾಲಕೃಷ್ಣ ಭಟ್ಟರು ಹೇಳಿದರು.

ಮೂಲ್ಕಿ ಬಪ್ಪನಾಡು ಜ್ಞಾನಮಂದಿರದಲ್ಲಿ ಇತ್ತೀಚೆಗೆ ಖ್ಯಾತ ಬಣ್ಣದ ವೇಷಧಾರಿ "ಬಣ್ಣದ ಮಹಾಲಿಂಗ" ಅವರನ್ನು ಸನ್ಮಾನಿಸಿದ ಸಂದರ್ಭದಲ್ಲಿ ಅವರು ಅಭಿನಂದನಾ ಭಾಷಣ ಮಾಡುತ್ತಿದ್ದರು.

ಯಕ್ಷಗಾನ ಲೋಕದ ಪರಂಪರೆಯ ಬಣ್ಣದ ವೇಷಧಾರಿಗಳಲ್ಲಿ ಈಗ ಕೆಲವೇ ಮಂದಿ ಉಳಿದಿದ್ದು, ಮುಂದೆ ಅಂತಹ ವೇಷ ಮರೆಯಾಗಿ ಹೋಗುವ ಭೀತಿ ಇಲ್ಲದಿಲ್ಲ. ಬಣ್ಣದ ವೇಷಧಾರಿಗಳ ಬಗ್ಗೆ ಯಕ್ಷಗಾನ ಪ್ರಪಂಚದಲ್ಲಿ ತೋರಲಾಗುವ ಕೀಳರಿಮೆ, ಪ್ರೋತ್ಸಾಹದ ಕೊರತೆ ಇವೆಲ್ಲಾ ಅಂತಹ ದುರಂತಕ್ಕೆ ದಾರಿ ಮಾಡಿಕೊಡುತ್ತಿವೆ. ಬಣ್ಣದ ವೇಷಧಾರಿಗಳು ನಿರುತ್ಸಾಹಿಗಳಾಗುವಂತೆ ಮಾಡಬೇಡಿರೆಂದು ಅವರು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬಣ್ಣದ ವೇಷದ ಪರಂಪರೆಯನ್ನು ಉಳಿಸಿಕೊಳ್ಳುವ ಯತ್ನ ನಡೆಯಬೇಕಾಗಿದೆ. ಆ ನಿಟ್ಟಿನಲ್ಲಿ ಸನ್ಮಾನ ಸಮಾರಂಭಗಳೂ ಪ್ರಮುಖಪಾತ್ರ ವಹಿಸಬಲ್ಲವು. ತಮ್ಮನ್ನು ಗುರುತಿಸಿ ಗೌರವಿಸುವವರು ಇದ್ದಾರೆ ಎಂಬುದರಿಂದ ಆ ಕಲಾವಿದರಲ್ಲಿ ಸುಪ್ತ ಹೋಗಿರುವ ಉತ್ಸಾಹ ಮತ್ತೆ ಚಿಮ್ಮಿ ಹರಿಯಲು ಅನುವು ಮಾಡಿಕೊಡಬಲ್ಲುದು. ತಾವು ಅರಗಿಸಿಕೊಂಡಿರುವ ಕಲೆ ತಮ್ಮ ನಂತರವೂ ಚಿರಸ್ಥಾಯಿಯಾಗಿ ಉಳಿಯುವಂತೆ ಯುವ ಕಲಾವಿದರನ್ನು ಸಿದ್ಧಗೊಳಿಸಲು ಅವರು ಮುಂದೆ ಬರುವಂತೆ ಮಾಡಬಲ್ಲದ್ದಾಗಿದೆ ಎಂದರು.

"ಬಣ್ಣದ ಮಹಾಲಿಂಗ" ಅವರನ್ನು ಹೆಸರಾಂತ ಯಕ್ಷಗಾನ ಪ್ರಸಂಗಕರ್ತ ನಾರಾಯಣ ಶೆಟ್ಟಿಯವರು ಸನ್ಮಾನ ಪತ್ರ ನೀಡಿ, ಶಾಲು ಹೊದಿಸಿ ಗೌರವಿಸಿದರು.

ಇದೇ ಸಂದರ್ಭದಲ್ಲಿ ಕಿನ್ನಿಗೋಳಿಯ ಟಿ. ದಾಮೋದರ ಶೆಟ್ಟಿಗಾರರ ವ್ಯವಸ್ಥಾಪಕತ್ವದ "ಮೋಹಿನಿ ಕಲಾ ಸಂಘ"ದ ವೇಷಭೂಷಣಗಳನ್ನು ಪರಿಕ್ಕೃಷ್ಣ ಪುನರೂರು ಅವರು ಉದ್ಘಾಟಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕಿನ್ನಿಗೋಳಿಯ ಎ. ಶ್ರೀಧರ ಶೆಟ್ಟರು ವಹಿಸಿದ್ದರು. ಸಮಾರಂಭದ ಅಂಗವಾಗಿ ತೆಂಕುತಿಟ್ಟಿನ ಹೆಸರಾಂತ ಕಲಾವಿದರ ಸಮ್ಮಿಲನದಲ್ಲಿ ಅಕ್ಷಯಾಂಬರ, ಕೀಚಕ ವಧೆ ಮತ್ತು ವೀರ ಅಭಿಮನ್ಯು ಎಂಬ ಪ್ರಸಂಗಗಳ ಯಕ್ಷಗಾನ ಪ್ರದರ್ಶನ ಜರಗಿತು.

## ಬೈಂದೂರಿನಲ್ಲಿ ಶಾರದೋತ್ಸವ

ಬೈಂದೂರು, ಅ. 7 – ಬೈಂದೂರಿನಲ್ಲಿ ಅಕ್ಟೋಬರ್ 9ರಿಂದ 12ವರೆಗೆ ಸಾರ್ವಜನಿಕ ಸಮಾರಂಭದಿಂದ ಶಾರದೋತ್ಸವ ವನ್ನು ಆಚರಿಸಲಾಗುವುದು.

[illegible] ... 17 ಮಂದಿ ... [illegible]

## ಮಹಾಸಭೆ

[illegible] ... 1986–87 ... 10 ಮಂದಿ ... [illegible]

## IN THE COURT OF THE CIVIL JUDGE AT UDUPI D.K.

Matrimonial Case No-12/86

Between

Mr. Nelson —Petitioner

and

Smt. Prabhavathi —Opponent

To.

The Opponent:

Smt. Prabhavathi
W/o. Mr. Nelson, D/o. of John D'Soans, Protestant Christian, B.I.T. Chawl, No. 11/67, Agripada, Bombay 400 011.

Please take notice that the above petition filed by the petitioner against you for a decree for judicial separation from you stands posted to 30-10-1986 at 11-00 a.m., for your appearance. If you fail to appear in person or through an Advocate on the said date and time, the case will be decided in your absence.

By order of the court

P. Shivaji Shetty,
B.A., LL.B.
Advocate for Petitioner

Place: Udupi D.K.
Date: 30-9-1986

## ದೂರದರ್ಶನ

8-10-86 (ಬುಧವಾರ)

ಬೆಳಿಗ್ಗೆ 7-00 ಭಾರತ ಮತ್ತು ... 7-40 ... 8-00 ... 9-00 ... 9-50 ... 10-20 ... 10.45 ... 2000 ... [illegible]

## ಇಂದಿನ ಕಾರ್ಯಕ್ರಮ

ಮಂಗಳೂರು

ಸಂಜೆ 6-15ಕ್ಕೆ ... [illegible] ... 31ನೇ ... 6.15ಕ್ಕೆ ...

ಉರ್ವ

ರಾತ್ರಿ 10ಕ್ಕೆ ... [illegible]

ಪಡೀಲು

ರಾತ್ರಿ 7.30ಕ್ಕೆ ... [illegible]

ಸುರತ್ಕಲ್

ರಾತ್ರಿ 9–30ಕ್ಕೆ ... [illegible]

ಕಲ್ಲಾಪು

[illegible]

ಕತ್ತಲ್‌ಸಾರ್

[illegible]

ಮೂಡಬಿದ್ರೆ

ಅಪರಾಹ್ನ 3ಕ್ಕೆ ... [illegible]

ಕಿನ್ನಿಗೋಳಿ

ರಾತ್ರಿ 9–30ಕ್ಕೆ ... [illegible]

ಕುಂದಾಪುರ

ರಾತ್ರಿ 9 ... [illegible]

ಕುಟ್ಯಾರು

ಅಪರಾಹ್ನ 3.30 ... [illegible]

## ಆಕಾಶವಾಣಿ

ಬೆಂಗಳೂರು ಮೈಸೂರು

8-10-86 (ಬುಧವಾರ)

ಬೆಳಿಗ್ಗೆ 6-00 ... 6-10 ... 6-45 ... 7-20 ... 7-45 ... 8-21 ... 9-15 ... 9-25 ... 12.30 ... 1-00 ... 1–20 ... 2-10 ...

ಸಂಜೆ 5-30 ... 6-15 ... 6-50 ... 7-45 ... 8-10 ... 8-30 ... 9-16 ... 9-30 ... 10–30 ...

ಭದ್ರಾವತಿ

ಬೆಳಿಗ್ಗೆ 6–10 ... 6-41 ... 6-45 ... 7–15 ... 7-45 ...

ಮಧ್ಯಾಹ್ನ 12–30 ... 1-00 ಭಕ್ತಿಗೀತೆಗಳು, 1-20 ಕಾವ್ಯವಾಚನ, 2-10 ಚಿತ್ರಗೀತೆಗಳು.

ಸಂಜೆ 5-30 ಚಿತ್ರ ರಂಜನಿ, 8-10 ... 9-16 ಸುತ್ತ ಮುತ್ತ, 10-30 ರಾಗ ರಂಜನಿ.

## ವಾಣಿಜ್ಯ ವ್ಯವಹಾರ

7—10—1986—ಮಂಗಳೂರು

ಅಡಿಕೆ (ಪ್ರತಿ ಕ್ವಿಂಟಾಲಿಗೆ)

| | | |
|---|---|---|
| ಹಳೆಯದು | 2332 | 2902 |
| ಹೊಸದು | | 2020 |
| ಕೋಕಾ | 1370 | 1824 |
| ಸ್ಥಳೀಯ ಕೊಬ್ಬರಿ | 1750 | 2008 |
| ತೆಂಗಿನಕಾಯಿ (ಸಾವಿರಕ್ಕೆ) | | |
| ಸ್ಥಳೀಯ ಒಂದನೇ ದರ್ಜೆ | 2650 | 3450 |
| ಎರಡನೇ ದರ್ಜೆ | 2000 | 2450 |
| ಆಮದು | | |
| [illegible] (ಸಾವಿರಕ್ಕೆ) | | |
| ಹಣ್ಣಡಿಕೆ | | |
| [illegible] (ಕ್ವಿಂ.ಗೆ) | | |
| ಅಕ್ಕಿ (ಸ್ಥಳೀಯ) | 335 | 350 |
| ಕಟ್ಟಸಾಂಬಾರ್ | 350 | 365 |
| [illegible] 8 | 330 | 340 |
| ಭತ್ತ ಆಮದು | 220 | 225 |
| ಬೆಲ್ಲ: ಸ್ಥಳೀಯ | | — |
| ಆಮದು ಬಿಳಿ | | 450 |
| ಕೆಂಪು | | 420 |
| ಕಪ್ಪು | | 340 |
| ಮೆಣಸು: ಸ್ಥಳೀಯ | | |
| ಆಮದು | 750 | 1550 |
| ಕಾಳುಮೆಣಸು | | 6354 |
| ಗೇರು ಬೀಜ (ಕಚ್ಚಾ) | | |
| ಗೇರು [illegible] | | 90 |
| ಕೆಂಪು | | |
| [illegible] (ನೂರಕ್ಕೆ) | 8.50ರಿಂದ | 88 |

ಮುಂಬೈ

| | | |
|---|---|---|
| ನೆಲಗಡಲೆ (ಬೋಲ್ಡ್) | | 465 |
| ನೆಲಗಡಲೆ (ಉತ್ತಮ) | | 470 |
| ನೆಲಗಡಲೆ ಎಣ್ಣೆ | | 257.92 |
| ಕಾಳುಮೆಣಸು | | 3500 |
| ತೆಂಗಿನೆಣ್ಣೆ | | 310 |
| ಕೊಬ್ಬರಿ (ರಾಜಾಪುರ) | | 2400 |
| ಸಕ್ಕರೆ (ಎಂ.30) | 599 | 614 |
| ಸಕ್ಕರೆ (ಎಸ್.30) | | 590 |
| ಆಮದು ಸಕ್ಕರೆ | | 590 |
| ಬೆಳ್ಳಿ (.996 ಫೈನ್‌ನೆಸ್) ರೂ. | 4231 | 4250 |
| ಬೆಳ್ಳಿ (.916 ಫೈನೆಸ್) ರೂ. | 4228 | 4250 |
| ಚಿನ್ನ ಸ್ಟಾಂಡರ್ಡ್ ರೂ. | 2295 | 2294 |
| ಚಿನ್ನ 22 ಕ್ಯಾರೆಟ್ ರೂ. | 2104 | 2103 |


## ನವಮಂಗಳೂರು ಬಂದರ ಮಂಡಳಿ,

ಸಿವಿಲ್ ಇಂಜಿನಿಯರಿಂಗ್ ವಿಭಾಗ, ಪಣಂಬೂರು.

ನಂ.: 8/4/86/ಆರ್‌ಬಿಎಲ್–1 ದಿನಾಂಕ: 29–9–1986.

### ಏಲಂ ನೋಟೀಸು

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ ನವಮಂಗಳೂರು ಬಂದರದ ಎಸ್ಟೇಟ್‌ನಲ್ಲಿರುವ ಎಲ್ಲಾ ಮರಗಳ (ಕ್ವಾರ್ಟರ್ಸ್‌ನ ಕಾಂಪೌಂಡಿನಲ್ಲಿರುವ ಮರಗಳ ಹೊರತು) ಫಲಗಳನ್ನು ಕೊಯ್ಯುವ ಹಕ್ಕನ್ನು ಎರಡು ವರ್ಷಗಳ ವರೆಗೆ ತಾರೀಕು 15–10–1986ರಂದು ಬೆಳಿಗ್ಗೆ ಘಂಟೆ 10-30ಕ್ಕೆ ವಿಚಾರಣಾ ಆಫೀಸಿನಲ್ಲಿ ಬಂದರದ ಎಸ್ಟೇಟ್ ಆಫೀಸರ್‌ರವರು ಬಹಿರಂಗವಾಗಿ ಏಲಂ ಮಾಡಲಿರುವರು. ಇಚ್ಛಿಸುವವರು ಏಲಂನಲ್ಲಿ ಭಾಗವಹಿಸಿ ಪಡಕೊಳ್ಳಬಹುದಾಗಿದೆ.

ಈ ಏಲಂ ಕೆಳಕಂಡ ಶರ್ತಗಳನ್ನೊಳಗೊಂಡು ನಡೆಯುವುದಾಗಿರುತ್ತದೆ.

1) ಫಲ ಕೊಯ್ಯುವ ಹಕ್ಕಿನ ಕನಿಷ್ಠ ಅಂದಾಜು ಮೊತ್ತ ವರ್ಷಕ್ಕೆ ರೂ.14,600-00 ಆಗಿರುತ್ತದೆ.
2) ಏಲಂನಲ್ಲಿ ಭಾಗವಹಿಸುವವರು ಏಲಂನ ಮೊದಲು ಸ್ಥಳದಲ್ಲಿ ರೂ. 200–00ನ್ನು ಮುಂಜಾಗ್ರತಾ ಠೇವಣಿಯಾಗಿ ಎಸ್ಟೇಟ್ ಆಫೀಸರರಲ್ಲಿ ಇಡತಕ್ಕದ್ದು. ಮುಂಜಾಗ್ರತಾ ಠೇವಣಿಯನ್ನು ಪಾವತಿ ಮಾಡಿ ಏಲಂನಲ್ಲಿ ಏಲಂದಾರನು ಭಾಗವಹಿಸದೇ ಏಲಂ ಮಾಡದಾಗಿದ್ದರೆ ಭದ್ರತಾ ಠೇವಣಿಯನ್ನು ಬಂದರ ಮಂಡಳಿಗೆ ಮುಟ್ಟುಗೋಲು ಹಾಕಲಾಗುವುದು. ಏಲಂ ಆದ ನಂತರ ಯಶಸ್ವೀ ಏಲಂದಾರನ ಹೊರತು ಇತರರ ಹಣವನ್ನು ಸ್ಥಳದಲ್ಲಿಯೇ ಮರುಪಾವತಿ ಮಾಡಲಾಗುವುದು.
3) ಯಶಸ್ವೀ ಏಲಂದಾರರು ಮೊಬಲಗು ಹಾಗೂ 5 ಶೇ. ಮಾರಾಟ ತೆರಿಗೆ ಹಾಗೂ ಮಾರಾಟ ತೆರಿಗೆಯ ಮೇಲೆ 10 ಶೇ. ಸರ್‌ಚಾರ್ಜ್ ಸಹಿತ ತಕ್ಷಣ ಹಣವನ್ನು ಪಾವತಿಮಾಡತಕ್ಕದ್ದು.
4) ಏಲಂದಾರನೇ ಮರಗಳ ಹಾಗೂ ಫಲಗಳ ಜಾಗ್ರತೆಯನ್ನು ನೋಡಿಕೊಳ್ಳತಕ್ಕದ್ದು. ಮುಖ್ಯವಾಗಿ ತೆಂಗಿನ ಮರಗಳನ್ನು ವರ್ಷ ವರ್ಷವೂ ಅವುಗಳಿಗೆ ನೀರು, ಗೊಬ್ಬರ ಇತ್ಯಾದಿಗಳನ್ನು ಹಾಕಿ, ಚೆನ್ನಾಗಿ, ಏಲಂದಾರನು ನೋಡಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಏಲಂನ್ನು ಅವಧಿಗಿಂತ ಮುಂಚಿತವಾಗಿ ರದ್ದುಪಡಿಸುವ ಹಕ್ಕು ನವಮಂಗಳೂರು ಬಂದರ ಮಂಡಳಿಯ ಅಧ್ಯಕ್ಷರವರಿಗೆ ಇರುತ್ತದೆ. ಮರಗಳನ್ನು ಕಡಿಯುವ ವ ವಿರೂಪಗೊಳಿಸುವ ಹಕ್ಕು ಏಲಂದಾರನಿಗೆ ಇರುವುದಿಲ್ಲ. ಹೀಗೆ ಮರಗಳನ್ನು ಕಡಿದಲ್ಲಿ ಯಾ ವಿರೂಪಗೊಳಿಸಿದಲ್ಲಿ ಏಲಂದಾರನು ಇಡತಕ್ಕ ಭದ್ರತಾ ಠೇವಣಿಯನ್ನು ಬಂದರ ಮಂಡಳಿಗೆ ಮುಟ್ಟುಗೋಲು ಹಾಕಲಾದೀತು.
5) ಯಶಸ್ವೀ ಏಲಂದಾರನು ಭದ್ರತಾ ಠೇವಣಿಯಾಗಿ ರೂ. 1,000–00ವನ್ನು ಇಡತಕ್ಕದ್ದು. ಇದು ಏಲಂ ಶರ್ತಗಳ ಪಾಲನೆಗೆ ಭದ್ರತೆಯಾಗಿರುತ್ತದೆ.
6) ಮೇಲಿನ ಏಲಂನ ಮೊತ್ತವು ಒಂದು ವರ್ಷಕ್ಕೆ ಮಾತ್ರವಾಗಿರುತ್ತದೆ. ಮುಂದಿನ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ 15ನೇ ತಾರೀಕಿನೊಳಗೆ ಅಷ್ಟೇ ಹಣವನ್ನು ಮಾರಾಟ ತೆರಿಗೆ ಹಾಗೂ ಸರ್‌ಚಾರ್ಜ್ ಸಹಿತ ಆಫೀಸಿನಲ್ಲಿ ಪಾವತಿ ಮಾಡಿ ರಶೀದಿ ಪಡೆದು ಏಲಂ ವ್ಯಾದೆಯನ್ನು ಮುಂದುವರಿಸತಕ್ಕದ್ದು.
7) ನವಮಂಗಳೂರು ಬಂದರದ ಕೆಲಸವನ್ನು ನಿರ್ವಹಿಸುವ ಬಗ್ಗೆ ಸ್ಥಳದಲ್ಲಿ ಮರಗಳನ್ನು ಕಡಿದಲ್ಲಿ ಈ ಬಗ್ಗೆ ನಷ್ಟವನ್ನು ಕೇಳುವ ಹಕ್ಕು ಏಲಂದಾರನಿಗಿರುವುದಿಲ್ಲ.
8) ಫಲಗಳನ್ನು ಕೊಯ್ಯುವ ಹಕ್ಕಿನ ಹೊರತು ಮರಗಳ ಮೇಲೆ ಏಲಂದಾರನಿಗೆ ಯಾವ ತರದ ಹಕ್ಕೂ ಇರುವುದಿಲ್ಲ.
9) ಈ ಏಲಂನ್ನು ಖಾಯಂ ಮಾಡುವ ವ ತಿರಸ್ಕರಿಸುವ ಹಕ್ಕು ಬಂದರದ ಅಧ್ಯಕ್ಷರವರಿಗಿದ್ದು ಎಲ್ಲಾ ಸಂದರ್ಭಗಳಲ್ಲಿ ಅವರ ತೀರ್ಮಾನವೇ ಕೊನೆಯದಾಗಿದ್ದು ಯಶಸ್ವೀ ಏಲಂದಾರನಿಗೆ ಅನ್ವಯಿಸುವುದಾಗಿರುತ್ತದೆ.
10) ಯಶಸ್ವೀ ಏಲಂದಾರನು ಸೆಕ್ಯೂರಿಟಿ ಕಾಂಪೌಂಡ್ ವಾಲ್‌ನ ಆವರಣದೊಳಗಿನ ಪ್ರದೇಶದಲ್ಲಿ ಅಂದರೆ ದಕ್ಕೆ ಮತ್ತು ತೈಲ ಜೆಟ್ಟಿ ಮುಂತಾದ ಪ್ರದೇಶದಲ್ಲಿ ಫಲಗಳನ್ನು ಕೊಯ್ಯಲು/ಕಾಯಲು ಬೇಕಾದ ಪರವಾನಿಗೆಯನ್ನು ಅದಕ್ಕೆ ಬೇಕಾದ ಹಣವನ್ನು ತೆತ್ತು ಸಹಾಯಕ ಭದ್ರತಾ ಅಧಿಕಾರಿಯವರಿಂದ ಪಡೆಯತಕ್ಕದ್ದು.

ಎಚ್. ಪದ್ಮನಾಭ ಶೆಣೈ,
ಎಸ್ಟೇಟ್ ಆಫೀಸರ್,
ಪಣಂಬೂರು. ನವಮಂಗಳೂರು ಬಂದರ ಮಂಡಳಿ.



ಆಂಧ್ರ ಪ್ರದೇಶ ಸರಕಾರ

ಪ್ರತಿ ಶುಕ್ರವಾರ ಡ್ರಾ. ಪ್ರತಿ ಶುಕ್ರವಾರ ಡ್ರಾ.

ಭಾಗ್ಯಲಕ್ಷ್ಮಿ

ಆಂಧ್ರಪ್ರದೇಶ ಸರ್ಕಾರದ ಲಾಟರಿ.

ಮೊದಲನೆ ಬಹುಮಾನ ರೂ. 1.00.000. (ಎಲ್ಲಾ ಶ್ರೇಣಿಗಳಿಗೂ ಸಹ)
1–2 ನೇ ಬಹುಮಾನ ರೂ10 000( " )
ಬಹುಮಾನಗಳ ಮೊತ್ತ ರೂ. 5,07,600
ಬಹುಮಾನಗಳ ಸಂಖ್ಯೆ 54,456

ಪ್ರತಿ ಶುಕ್ರವಾರ ಡ್ರಾ. ಪ್ರತಿ ಶುಕ್ರವಾರ ಡ್ರಾ.

## ಆಂಧ್ರ ಪ್ರದೇಶ ರಾಜ್ಯ ಲಾಟರಿ

3–10–86ರಂದು ಅಪರಾಹ್ನ 3-00 ಗಂಟೆಗೆ ಶ್ರೀ ತ್ಯಾಗರಾಜ ಗಾನಸಭಾ, ಚಿಕ್ಕಡಪಲ್ಲಿ, ಹೈದರಾಬಾದ್, ಇಲ್ಲಿ ಜರುಗಿದ 62ನೇ ಭಾಗ್ಯಲಕ್ಷ್ಮೀ ಆಂಧ್ರಪ್ರದೇಶ ರಾಜ್ಯ ಲಾಟರಿಯ ಸಾಪ್ತಾಹಿಕ 'ಡ್ರಾ' ಫಲಿತಾಂಶ ಹೀಗಿದೆ:–

| | | | | | |
|---|---|---|---|---|---|
| 1 ಪ್ರಥಮ ಬಹುಮಾನ ರೂ. 1,00,000/- (ಎಲ್ಲ ಶ್ರೇಣಿಗಳಿಗೆ ಅನ್ವಯಿಸುತ್ತದೆ) | ಎಚ್ ವೈ 393455 | | | | |
| 1 ದ್ವಿತೀಯ ಬಹುಮಾನ ರೂ. 10,000/- (ಎಲ್ಲ ಶ್ರೇಣಿಗಳಿಗೆ ಅನ್ವಯಿಸುತ್ತದೆ) | ಎಚ್ ವೈ 108231 | | | | |
| 3 ತೃತೀಯ ಬಹುಮಾನಗಳು ತಲಾ ರೂ. 5,000/- | ಎಚ್‌ಎಕ್ಸ್ 102534 | ಎಚ್‌ವೈ 341394 | ಎಚ್‌ಝಡ್ 158940 | | |
| ಈ ಕೆಳಗಿನ ಅಂಕೆಗಳಿಂದ ಕೊನೆಗೊಳ್ಳುವ ಎಲ್ಲ ಟಿಕೆಟ್ ನಂಬ್ರಗಳಿಗೆ ಎಲ್ಲ ಶ್ರೇಣಿಗಳಿಗೆ ಅನ್ವಯ | | | | | |
| 90 ನಾಲ್ಕನೆಯ ಬಹುಮಾನಗಳು ತಲಾ ರೂ. 500/- | 00675 | 19276 | 28405 | 37759 | 40263 |
| | 52031 | 69279 | 70232 | 83475 | 90868 |
| 90 ಐದನೆಯ ಬಹುಮಾನಗಳು ತಲಾ ರೂ. 100/- | 0291 | | | | |
| 270 ಆರನೆಯ ಬಹುಮಾನಗಳು ತಲಾ ರೂ. 50/- | 0967 | 5158 | 0235 | | |
| 9000 ಏಳನೆಯ ಬಹುಮಾನ ತಲಾ ರೂ. 10/- | 089 | 111 | 240 | 321 | 465 |
| | 500 | 647 | 798 | 881 | 956 |
| 27,000 ಎಂಟನೆಯ ಬಹುಮಾನ ತಲಾ ರೂ. 5/- | 98 | 70 | 19 | | |
| ಈ ಮುಂದಿನ ಟಿಕೆಟ್ ನಂಬರ್‌ಗಳಿಂದ ಕೊನೆಗೊಳ್ಳುವ ಕೌಂಟರ್‌ಫಾಯಿಲ್‌ಗಳಿಗೆ ಮಾರಾಟಗಾರರ ವಿಶೇಷ ಬಹುಮಾನ | 80 | 38 | | | |

- ಸರಿಯಾದ ನಂಬರ್‌ಗಳಿಗೆ ಅಧಿಕೃತ ರಾಜ್ಯಪತ್ರವನ್ನು ಪರಾಮರ್ಶಿಸಿ.
- ಟಿಕೇಟಿನ ಹಿಂಭಾಗದಲ್ಲಿ ಪ್ರಕಟಿತ ನಿಯಮ ರೀತ್ಯಾ ಬಹುಮಾನಗಳಿಗೆ ಕ್ಲೇಮ ಸಲ್ಲಿಸಿ.

ಸಹಿ/- ಎಸ್. ಕೆ. ಸುರೇಂದ್ರ,
ಕಮಿಷನರ್
ರಾಜ್ಯ ಲಾಟರಿಗಳು
ಆಂಧ್ರಪ್ರದೇಶ ಸರಕಾರ.

ಹೈದರಾಬಾದ್
ದಿನಾಂಕ: 3–10–86.

ಮುಂದಿನ 'ಡ್ರಾ': 10-10-1986

ಅದೃಷ್ಟವನ್ನು ಸೃಷ್ಟಿಸಿಕೊಳ್ಳಬೇಕು – ಭವಿಷ್ಯವನ್ನು ಪಡೆದುಕೊಳ್ಳಬೇಕು

Flash/62/86-87